ಮೈಸೂರು ಶ್ರೀಗಂಧಕ್ಕೆ ಪ್ರಸಿದ್ಧ. ಗಂಧದ ಅಂಶಗಳನ್ನು ಈ ಕಡ್ಡಿಯೊಳಗೆ ಸೇರಿಸಿ ಹೊಸೆಯುವ ಕಾರಣ ಇದಕ್ಕೆ 'ಗಂಧದ ಕಡ್ಡಿ' ಎಂಬ ಹೆಸರು ಬಂದಿದೆ. ಇದೀಗ ಸಂಪಿಗೆ, ಮಲ್ಲಿಗೆ, ಸುಗಂಧರಾಜ (ರಜನಿಗಂಧ), ಜಾಜಿ ಮಲ್ಲಿಗೆ, ಗುಲಾಬಿ.. ಹೀಗೆ ಘಮ ಘಮಿಸುವ ಹೂವಿನ ಎಸೆನ್ಸ್‌ಗಳನ್ನು ಬಳಸಿ ತಯಾರಿಸುವ ಗಂಧದ ಕಡ್ಡಿಗಳು ನಾನಾ ಪ್ಯಾಕೆಟ್‌ಗಳೊಂದಿಗೆ ಜನರನ್ನು ಆಕರ್ಷಿಸುತ್ತಿವೆ.

ಸ್ವರ್ಣಚಂಪಾ, ಸೈಕಲ್‌ಪ್ಯೂರ್, ಸ್ವರ್ಣ, ಮೋಕ್ಷಾ ಮುಂತಾದ ಬ್ರ್ಯಾಂಡ್‌ಗಳ ಅಗರಬತ್ತಿಗಳು ಮಾರುಕಟ್ಟೆಯಲ್ಲಿ ಸುವಾಸನೆಯಲ್ಲೂ, ಬೆಲೆಯಲ್ಲೂ ಸ್ಪರ್ಧೆ ನಡೆಸುತ್ತಿವೆ. ಮೋಕ್ಷಾ ಅಗರಬತ್ತಿಗಳು ಫ್ಲೋರಲ್, ಹರ್ಬಲ್, ಓರಿಯಂಟಲ್, ವುಡಿ, ಫ್ರೂಟಿ, ಕಾಸ್ಮೆಟಿಕ್ಸ್ ಮುಂತಾದ ವೈವಿಧ್ಯಗಳಲ್ಲಿ ಲಭ್ಯ. ಇವೆಲ್ಲ ಮಲೇಷ್ಯಾ, ಬಾಂಗ್ಲಾದೇಶ, ಮಾರಿಷಸ್, ಕೆನಡ, ಇಂಡೊನೇಷ್ಯಾಗಳಿಗೆ ರಫ್ತಾಗುತ್ತಿವೆ. ಇದೀಗ ಬಹುತೇಕ ಅಗರಬತ್ತಿ ಕಾರ್ಖಾನೆಗಳಲ್ಲಿ ಹೊರಗುತ್ತಿಗೆಯದ್ದೇ ಕಾರುಬಾರು. ಬತ್ತಿ ಹೊಸೆಯಲು ಬೇಕಾಗುವ ಮರದ ಕಡ್ಡಿ ಹಾಗೂ ಸುವಾಸನಾ ಪುಡಿಗಳನ್ನು ಕಂಪೆನಿಗಳಿಂದ ಪಡೆದುಕೊಂಡು ಅಗರಬತ್ತಿ ತಯಾರು ಮಾಡಲು ಮಹಿಳೆಯರು ಮುಂದಾಗಿದ್ದಾರೆ. ಸಾವಿರಾರು ಮಹಿಳೆಯರು ಬೆಳಗಿನಿಂದ ಸಂಜೆಯವರೆಗೂ ಇದೇ ಕಾಯಕದಲ್ಲಿ ನಿರತರಾಗಿದ್ದಾರೆ. ಬಿದಿರು, ಉರಿಯಲು ಬೇಕಾದ ಇದ್ದಿಲು ಅಥವಾ ಮರದ ಪುಡಿ, ಅಂಟು ಅಥವಾ ಜಿಗುಟಿನಿಂದ ಅಗರಬತ್ತಿ ತಯಾರಿಸಲಾಗುತ್ತದೆ.

ಮೈಸೂರು, ಬೆಂಗಳೂರುಗಳಲ್ಲಿ ಜೈಲಿನಲ್ಲಿರುವ ಕೈದಿಗಳು ಅಗರಬತ್ತಿ ಹೊಸೆಯುತ್ತಾರೆ. ಅಲ್ಲದೆ ಪ್ಯಾಕಿಂಗ್ ಕೂಡ ಇವರ ಬಳಿಯೇ ಮಾಡಿಸುತ್ತಾರೆ. ಆಫ್ರಿಕಾ, ಥಾಯ್ಲೆಂಡ್, ಮಲೇಷ್ಯಾ, ಸಿಂಗಾಪುರ ಅಷ್ಟೇ ಅಲ್ಲ ಕೊಲ್ಲಿ ರಾಷ್ಟ್ರಗಳಿಗೂ ಇದೇ ಅಗರಬತ್ತಿಗಳು ವಿವಿಧ ಸ್ವಾದಗಳೊಂದಿಗೆ ರಫ್ತಾಗುತ್ತವೆ. ಬ್ರೆಜಿಲ್, ಚಿಲಿ, ಅಮೆರಿಕಗಳ ಮನೆಮನೆಗಳಲ್ಲೂ ಪರಿಮಳಯುಕ್ತ ಅಗರಬತ್ತಿ ಬೆಳಗುತ್ತಿದೆ. ವಿದೇಶಗಳಲ್ಲಿ ಯೋಗ, ಧ್ಯಾನ ಕೇಂದ್ರಗಳಲ್ಲಿ ಅಗರಬತ್ತಿ ಹೆಚ್ಚಾಗಿ ಬಳಕೆಯಾಗುತ್ತಿದೆ.

ಅಗರಬತ್ತಿ ಉದ್ಯಮ ಆರಂಭವಾದದ್ದೇ ಕರ್ನಾಟಕದಲ್ಲಿ. 1990ರವರೆಗೆ ಬೆಂಗಳೂರು, ಮೈಸೂರು ಜಿಲ್ಲೆಗಳಲ್ಲಿ ಹಲವಾರು ಕಾರ್ಖಾನೆಗಳು ತಲೆಯೆತ್ತಿದವು.

'1890ರಲ್ಲಿ ಮೊದಲಿಗೆ ಅಗರಬತ್ತಿ ತಯಾರಿಕೆ ಆರಂಭವಾಯಿತು. ಮೈಸೂರಿನಲ್ಲಿ ಮಹಾರಾಜನ ದರ್ಬಾರಿನಲ್ಲಿ ಸುವಾಸನೆಗಾಗಿ ಅಗರಬತ್ತಿ ಹಚ್ಚಿ ಇಡಲಾಗುತ್ತಿತ್ತು. ಅದಾಗಿ ದರ್ಬಾರ್ ಬತ್ತಿ ತಯಾರಿಸಲಾಗುತ್ತಿತ್ತು. ಇದು ಶುದ್ಧ ಶ್ರೀಗಂಧದಿಂದ ತಯಾರಿಸಿದ್ದು. ಅಂಬಾರಿ ಬತ್ತಿ ಎಂದು ಮತ್ತಷ್ಟು ಘಮ ಬೀರುವ ಬತ್ತಿ ತಯಾರಿಸಲಾಗುತ್ತಿತ್ತು, ಇದು ಅರಮನೆಯ ಸುತ್ತಮುತ್ತ ಆನೆಲದ್ದಿ ಮುಂತಾದ ವಾಸನೆ ಹೋಗಲಾಡಿಸಲು ಬಳಸಲಾಗುತ್ತಿತ್ತು' ಎಂದು ಉದ್ಯಮದ ಇತಿಹಾಸವನ್ನು ವಿವರಿಸುತ್ತಾರೆ ಅಖಿಲ ಭಾರತ ಅಗರಬತ್ತಿ ತಯಾರಕರ ಸಂಘ (ಎಎಂಎ)ದ ಅಧ್ಯಕ್ಷ ಶರತ್‌ಬಾಬು ಪಿ.ಎಸ್.



ಪುರ ತಾಲ್ಲೂಕು ಹರಳಹಳ್ಳಿಯ ಶೈಲಜಾ ಅವರ ಅಗರಬತ್ತಿ ಘಟಕದಲ್ಲಿ ಪ್ಯಾಕಿಂಗ್‌ಗೆ ತ್ತಿರುವ ಅಗರಬತ್ತಿಗಳು. (ಚಿತ್ರ: ರವಿಕುಮಾರ್)

### ಅಖಿಲ ಭಾರತ ಅಗರಬತ್ತಿ ಉತ್ಪಾದಕರ ಸಂಘ

ಈ ಸಂಘ ಬೆಂಗಳೂರಿನಲ್ಲಿ 1949ರಲ್ಲಿ ಸ್ಥಾಪಿತವಾಯಿತು. ಆರಂಭದಲ್ಲಿ ಇದಕ್ಕೆ ಮೈಸೂರು ಊದುಬತ್ತಿ ಉತ್ಪಾದಕರ ಸಂಘ (ಮೈಸೂರು ಊದುಬತ್ತಿ ಉತ್ಪಾದಕರ ಸಂಘ– ಎಂಎಎಂಎ) ಎಂಬ ಹೆಸರಿತ್ತು. ಏಳು ಜನ ಸದಸ್ಯರ ಈ ಸಂಘ ಅಗರಬತ್ತಿ ತಯಾರಕರನ್ನು ಪ್ರೋತ್ಸಾಹಿಸುವ ಮಹತ್ತರ ಉದ್ದೇಶ ಹೊಂದಿತ್ತು. ಅದಾಗಿ 80ರ ದಶಕದಲ್ಲಿ ಈ ಸಂಘವನ್ನು ಅಖಿಲ ಭಾರತ ಅಗರಬತ್ತಿ ಉತ್ಪಾದಕರ ಸಂಘ (ಎಐಎಎಂಎ) ಎಂದು ಮರುನಾಮಕರಣ ಮಾಡಲಾಯಿತು. ಸದ್ಯ ಭಾರತದಲ್ಲಿ 700 ಅಗರಬತ್ತಿ ಉತ್ಪಾದಕರು ಎಐಎಎಂಎ ಸದಸ್ಯರಾಗಿದ್ದಾರೆ. ಶರತ್‌ಬಾಬು ಬಾಬು ಪಿ.ಎಸ್. ಈ ಸಂಘದ ಅಧ್ಯಕ್ಷರಾಗಿದ್ದಾರೆ.



ಅಧ್ಯಕ್ಷ ಶರತ್‌ಬಾಬು



ಮಾಜಿ ಅಧ್ಯಕ್ಷ ಅತ್ತರ್ ಸೈಯದ್

ಆಗೆಲ್ಲ ಕರ್ನಾಟಕದಲ್ಲಿ ಬಟ್ಟೆ ಮಿಲ್‌ಗಳಲ್ಲಿ ಸಾಕಷ್ಟು ಮಂದಿ ದುಡಿಯುತ್ತಿದ್ದರು. ಮಿನರ್ವ ಮಿಲ್, ಬಿನ್ನಿ ಮಿಲ್, ಎನ್‌ಟಿಸಿ ಮುಂತಾದ ಬಟ್ಟೆ ಕಾರ್ಖಾನೆಗಳಲ್ಲಿ ಪುರುಷರು, ಮಹಿಳೆಯರು ಕೆಲಸ ಮಾಡುತ್ತಿದ್ದರು. ಕಾರಣಾಂತರಗಳಿಂದ ಈ ಕಾರ್ಖಾನೆಗಳು ಮುಚ್ಚುವ ಹಂತಕ್ಕೆ ಬಂದಾಗ ಕಾರ್ಮಿಕರೆಲ್ಲ ಕೋಲಾರ, ಮುಳಬಾಗಲುಗಳಿಗೆ ಸ್ಥಳಾಂತರಗೊಂಡರು. ಅಲ್ಲಿ ಅಗರಬತ್ತಿ ಉದ್ಯಮದಲ್ಲಿ ತೊಡಗಿಸಿಕೊಂಡರು. ಅಗರಬತ್ತಿಯ ರೋಲಿಂಗ್, ಪ್ಯಾಕಿಂಗ್ ಎಲ್ಲವನ್ನೂ ಮಹಿಳೆಯರು ಮಾಡಲಾರಂಭಿಸಿದರು. ಶೇ.70 ರಷ್ಟು ಮಹಿಳೆಯರಿಗೆ ಇದೇ ಕಾಯಂ ಉದ್ಯೋಗವೂ ಆಯಿತು.

ಸದ್ಯ ಕರ್ನಾಟಕದಲ್ಲಿ ಸುಮಾರು ಐದು ಲಕ್ಷ ಮಂದಿ ಅಗರಬತ್ತಿ ಉದ್ಯಮವನ್ನೇ ನೆಚ್ಚಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಅದರಲ್ಲಿ ಶೇ.70ರಷ್ಟು ಮಹಿಳೆಯರು. ಹಳ್ಳಿಗಳಲ್ಲಿ ಕೃಷಿ ಇಲ್ಲದ ಸಮಯದಲ್ಲಿ ಅಗರಬತ್ತಿ ತಯಾರಿಕೆ ನಿರುದ್ಯೋಗವನ್ನು ನಿವಾರಿಸಿ ಕುಟುಂಬದ ಆರ್ಥಿಕ ನಿರ್ವಹಣೆಗೆ ನೆರವಾಗಿದೆ.

'ಅಗರಬತ್ತಿ ತಯಾರಿಕೆ ಕೆಲಸದಲ್ಲಿ ಹೆಚ್ಚಿನ ಶ್ರಮ, ಕೌಶಲ ಬೇಕಾಗುವುದಿಲ್ಲ. ಬಿಡುವಿನ ವೇಳೆಯಲ್ಲೂ ಮಾಡಬಹುದು. ಮಹಿಳೆಯರು ಕಾರ್ಖಾನೆ ಸಮಯ ಬಿಟ್ಟು ಮನೆಗೆ ಹೋದ ಮೇಲೂ ಕಚ್ಚಾ ಪದಾರ್ಥಗಳನ್ನು ಮನೆಗೆ ಕೊಂಡುಹೋಗಿ ಬತ್ತಿ ತಯಾರಿಸಿ ತರಬಹುದು. ಇದರಿಂದ ಹೆಚ್ಚಿನ ಆದಾಯವೂ ಸಿಗುತ್ತದೆ. ಜತೆಗೆ ಮುಸ್ಲಿಂ, ಕ್ರಿಶ್ಚಿಯನ್, ತಮಿಳು, ಹಿಂದೂ ಎಂಬ ಭೇದವಿಲ್ಲದೆ ಎಲ್ಲ ಧರ್ಮಗಳ ಮಹಿಳೆಯರೂ ಈ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ' ಎಂದು ಹೇಳುತ್ತಾರೆ ಶರತ್.

'ಆರೋಗ್ಯಕ್ಕೆ ಇದರಿಂದ ಹಾನಿಯೇನೂ ಇಲ್ಲ ಎನ್ನುವ ಅವರು, ಅಗರಬತ್ತಿ ತಯಾರಿಕೆಗೆ ಬಳಸುವ ಕಚ್ಚಾ ವಸ್ತುಗಳೆಲ್ಲವೂ ನೈಸರ್ಗಿಕವಾದದ್ದು. ಬಿದಿರು ಕಡ್ಡಿ, ಅಂಟು (ಜಿಗುಟು) ಪರಿಮಳಕ್ಕೆ ಬಳಸುವ ಸುಗಂಧ ಪದಾರ್ಥ ಎಲ್ಲವೂ ನಿಸರ್ಗದತ್ತವಾದದ್ದೇ. ಸುಗಂಧದ ಗುಣಮಟ್ಟ ಅಳೆಯುವ 'ಗ್ರಾಸ್' ತಂತ್ರಜ್ಞಾನವೂ ಕೂಡ ಗುಣಮಟ್ಟವನ್ನು ನಿಭಾಯಿಸುತ್ತದೆ. ಯಾವುದೇ ರಾಸಾಯನಿಕವನ್ನು ಇಲ್ಲಿ ಬಳಸಲಾಗುವುದಿಲ್ಲ. ಧೂಳು, ಹೊಗೆ ಉಂಟಾಗುವ ಪ್ರಮೇಯವೂ ಇಲ್ಲ. ಹೀಗಾಗಿ ಆರೋಗ್ಯದ ನಿಟ್ಟಿನಲ್ಲಿ ಇದು ಸಂಪೂರ್ಣ ಸುರಕ್ಷಿತ' ಎನ್ನುತ್ತಾರೆ ಅಖಿಲ ಭಾರತ ಅಗರಬತ್ತಿ ಉತ್ಪಾದಕರ ಸಂಘದ ಮಾಜಿ ಅಧ್ಯಕ್ಷ ಅತ್ತರ್ ಸೈಯದ್ ಮುಂತಾಹ ಹುಸೇನ್ ಸಲ್ಮಾನ್ ಅವರು.

### ಸ್ವಾವಲಂಬನೆಯತ್ತ ಮಹಿಳೆ

ಹಿಂದೆಲ್ಲ ಬಿದಿರಿನಲ್ಲಿ ಚೌಕಾಕಾರದ ಕಡ್ಡಿಗಳನ್ನು ತಯಾರಿಸಿ ಅಗರಬತ್ತಿ ಕಡ್ಡಿ